# ರಾಯಚೂರು ಜಿಲ್ಲಾ ಮಟ್ಟದ ಎಸ್ ಎಸ್ ಎಲ್ ಸಿ ರಚನಾ – 3 ರ ತರಬೇತಿಯಲ್ಲಿ ನೀಲ ನಕಾಶೆಯ ಪ್ರಕಾರ ತಯಾರಿಸಿದ ಪ್ರಶ್ನೆ ಪತ್ರಿಕೆಗಳು

## ಗುಪ್ತರು ತಂಡದ ಮಾದರಿ ಪ್ರಶ್ನೆ ಪತ್ರಿಕೆ – 3

ಪ್ರಶ್ನೆ I] ಈ ಕೆಳಗಿನ ಪ್ರಶ್ನೆಗಳಿಗೆ/ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಸೂಕ್ತ ಉತ್ತರಗಳನ್ನು ಆರಿಸಿ ಬರೆಯಿರಿ. 10 x 1 = 10

1 ಭಾರತದ ಮೊದಲ ಗವರ್ನರ್ ಜನರಲ್ __________.

ಎ) ವಾರನ್ ಹೇಸ್ಟಿಂಗ್ಸ್ ಬಿ) ಲಾರ್ಡ ವೆಲ್ಲಸ್ಲಿ ಸಿ) ಲಾರ್ಡ ವಿಲಿಯಂ ಬೆಂಟಿಂಕ್ ಡಿ) ರಾಬರ್ಟ್ ಕ್ಲೈವ್

2. ರಾಜ್ಯ ಪುನರ್ ವಿಂಗಡನಾ ಕಾನೂನು ಜಾರಿಗೆ ಬಂದ ವರ್ಷ __________.

ಎ) 1947 ಬಿ) 1950 ಸಿ) 1953 ಡಿ) 1956

3. ಪ್ರಸ್ತುತ ವಿಶ್ವಸಂಸ್ಥೆಯಲ್ಲಿ ಸದಸ್ಯತ್ವ ಹೊಂದಿದ ರಾಷ್ಟ್ರಗಳ ಸಂಖ್ಯೆ.

ಎ) 194 ಬಿ) 192 ಸಿ) 193 ಡಿ) 195

4. ಭಾರತದಂತೆ ಪ್ರಜಾಪ್ರಭುತ್ವ ಹೊಂದಿದ ದೇಶ.

ಎ) ಇಂಗ್ಲಂಡ್ ಬಿ) ಚೀನಾ ಸಿ) ಪಾಕಿಸ್ತಾನ ಡಿ) ಉತ್ತರ ಕೋರಿಯಾ

5. ಭಾರತದ ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಮುಖ್ಯವಾದುದು.

ಎ) ಜಾತಿ ವ್ಯವಸ್ಥೆ ಬಿ) ಹೆಣ್ಣು ಭ್ರೂಣ ಹತ್ಯೆ & ಹೆಣ್ಣು ಶಿಶು ಹತ್ಯೆ ಸಿ) ಲಿಂಗ ಅಸಮಾನತೆ ಡಿ) ಶೋಷಣೆ

6. ಭಾರತದ ವಿವಿದೋದ್ದೇಶ ನದಿ ಕಣಿವೆ ಯೋಜನೆ ____________

ಎ) ಕೃಷ್ಣಾ ನದಿ ಕಣಿವೆ ಯೋಜನೆ ಬಿ) ದಾಮೋದರ ನದಿ ಕಣಿವೆ ಯೋಜನೆ

ಸಿ) ನಾಗಾರ್ಜುನ ಸಾಗರ ಯೋಜನೆ ಡಿ) ಹಿರಾಕುಡ್ ಯೋಜನೆ

7. ಭಾರತದ ಭತ್ತದ ಕಣಜ.

ಎ) ರಾಜಸ್ತಾನ ಬಿ) ಕರ್ನಾಟಕ ಸಿ) ಪಂಜಾಬ್ ಡಿ) ಪಶ್ಚಿಮ ಬಂಗಾಳ

8. ಮಾನವನ ಜೀವನ ಮಟ್ಟವನ್ನು ಅಳೆಯುವ ಸೂಚಕಗಳಲ್ಲಿ ಇದು ಒಂದು.

ಎ) ಆರ್ಥಿಕ ಸಾಧನೆ ಬಿ) ಕೈಗಾರಿಕಾ ಸಾಧನೆ ಸಿ) ಶೈಕ್ಷಣಿಕ ಸಾಧನೆ ಡಿ) ತಾಂತ್ರಿಕ ಸಾಧನೆ

9. ಈ ಕೆಳಗಿನ ಖಾತೆಗಳಲ್ಲಿ ಬಡ್ಡಿಯನ್ನು ಪಡೆಯದಿರುವ ಖಾತೆಯನ್ನು ತಿಳಿಸಿ.

ಎ) ಆವರ್ತ ಠೇವಣಿ ಖಾತೆ ಬಿ) ಉಳಿತಾಯ ಖಾತೆ ಸಿ) ಚಾಲ್ತಿ ಖಾತೆ ಡಿ) ಮುದ್ಧತಿ ಖಾತೆ

10. ಜೆಟ್ ವಾಯು ಮಾರ್ಗವನ್ನು ಹುಟ್ಟು ಹಾಕಿದವರು _________

ಎ) ನರೇಶ ಗೋಯಲ್ ಬಿ) ಅಜೀಮ ಪ್ರೇಮಜಿ ಸಿ) ಧೀರುಬಾಯಿ ಅಂಬಾನಿ ಡಿ) ವರ್ಗೀಸ್ ಕುರಿಯನ್

ಪ್ರಶ್ನೆ II] ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 14 x 1 = 14

11. ಬ್ರಿಟಿಷರ ಆಗಮನದಿಂದ ಚರಿತ್ರೆಯ ಬರವಣಿಗೆಯ ಮೇಲಾದ ಪ್ರಭಾವವೇನು?

12. ಗೋವಾವನ್ನು ಪೋರ್ಚಗೀಸರಿಂದ ಮುಕ್ತಿಗೋಳಿಸಿದ ವರ್ಷ ಯಾವುದು?

13. ಲೇನಿನ್‌ನ ಜನಪರ ಘೋಷಣೆಯನ್ನು ಸ್ಪಷ್ಟೀಕರಿಸಿ.

14. ಕಳ್ಳಸಾಗಾಣಿಕೆ ನಿಯಂತ್ರಣಕ್ಕೆ ನಿಮ್ಮ ಎರಡು ಸಲಹೆಗಳನ್ನು ತಿಳಿಸಿ.

15. WHO ಇದನ್ನು ವಿಸ್ತರಿಸಿ.

16. ಪೂರ್ವಗ್ರಹ ಪದವನ್ನು ಅರ್ಥೈಸಿ.

17. ಬಾಲಕಾರ್ಮಿಕರ ಸಮಸ್ಯೆಯನ್ನು ಹೋಗಲಾಡಿಸಲು ಎರಡು ಸಲಹೆಗಳನ್ನು ನೀಡಿ.

18. ಭಾರತದಲ್ಲಿ ಅತಿ ಕಡಿಮೆ ಮಳೆ ಬೀಳುವ ಪ್ರದೇಶಗಳನ್ನು ತಿಳಿಸಿ.

19. ಮಿಶ್ರ ಬೇಸಾಯ ಎಂದರೇನು?

20. ಪೆಟ್ರೋಲಿಯಂನ್ನು ದ್ರವರೂಪದ ಚಿನ್ನ ಎಂದು ಕರೆಯುತ್ತಾರೆ. ಈ ಹೇಳಿಕೆಯನ್ನು ವಿಶ್ಲೇಷಿಸಿ.

21. ಮುಂಬಯಿ ಭಾರತದ ಮ್ಯಾಂಚೇಸ್ಟರ್ ಎಂಬುದನ್ನು ಸ್ಪಷ್ಟಿಕರಿಸಿ.

22. HDI ಯನ್ನು ವಿಸ್ತರಿಸಿ.

23. ವಿತ್ತೀಯ ಕೊರತೆಯನ್ನು ಸೂತ್ರ ರೂಪದಲ್ಲಿ ವ್ಯಕ್ತಪಡಿಸಿ.

24. ಬಯೋಕಾನ್ ನಿಗಮದ ಅಧ್ಯಕ್ಷರು ಯಾರು?

ಪ್ರಶ್ನೆ III] ಈ ಕೆಳಗಿನ ಪ್ರಶ್ನೆಗಳಿಗೆ ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. 15 x 2 = 30

25. ಯುರೋಪಿಯನ್ನರಿಗೆ ಭಾರತದ ಸಾಂಬಾರ ಪದಾರ್ಥಗಳು ಬಹಳ ಪ್ರಿಯವಾಗಿದ್ದವು ಎಂದು ಹೇಗೆ ಹೇಳುವಿರಿ.

26. ಕೊಡಗಿನ ದಂಗೆಯಲ್ಲಿ ಗುಡ್ಡೆಮನೆ ಅಪ್ಪಯ್ಯಗೌಡರ ಪಾತ್ರವನ್ನು ವಿವರಿಸಿ.

27. ಆನಿಬೆಸೆಂಟ್‌ರ ಸುಧಾರಣಾ ಕ್ರಮಗಳನ್ನು ತಿಳಿಸಿ. ಅಥವಾ

ಆರ್ಯ ಸಮಾಜದ ಬೋಧನೆಗಳು ಯಾವುವು?ತಿಳಿಸಿ.

28. ಎರಡನೇ ಮಹಾಯುದ್ಧಕ್ಕೆ ಕಾರಣಗಳೇನು?

29. ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಭಾಂದವ್ಯ ಅವಶ್ಯಕ ಏಕೆ?

30. ಬ್ರಷ್ಟಾಚಾರ ಎಂದರೇನು? ಅದನ್ನು ನಿಯಂತ್ರಿಸುವ ಸಂಸ್ಥೆ ಯಾವುದು?

31. ಜನಮಂದೆ ಎಂದರೇನು? ಉದಾ ಕೊಡಿ.

32. ಹಿಮಾಚಲದಲ್ಲಿ ಕಂಡು ಬರುವ ಗಿರಿಧಾಮಗಳನ್ನು ಪಟ್ಟಿ ಮಾಡಿರಿ.

33. ಮಣ್ಣಿನ ಸವೆತಕ್ಕೆ ಕಾರಣಗಳೇನು?

34. ಅರಣ್ಯಗಳ ಸಂರಕ್ಷಣಾ ವಿಧಾನಗಳನ್ನು ತಿಳಿಸಿ.

35. ಸಂಪರ್ಕದ ಸಾಧನಗಳನ್ನು ಹೆಸರಿಸಿ.

36. ಜನಸಂಖ್ಯಾ ಬೆಳವಣಿಗೆಯಿಂದುಂಟಾಗುವ ಸಮಸ್ಯೆಗಳಾವುವು?

37. ಚಂಡಮಾರುತದ ಪರಿಣಾಮಗಳಾವುವು?

38. ಹಸಿರು ಕ್ರಾಂತಿ ಎಂದರೇನು? ಹಸಿರು ಕ್ರಾಂತಿಯ ಪಿತಾಮಹ ಯಾರು?.

39. ವಿಶ್ವವ್ಯಾಪಾರ ಸಂಘಟನೆಯ ಉದ್ದೇಶಗಳಾವುವು?

ಪ್ರಶ್ನೆ IV] ಈ ಕೆಳಗಿನ ಪ್ರಶ್ನೆಗಳಿಗೆ ಐದು - ಆರು ವಾಕ್ಯಗಳಲ್ಲಿ ಉತ್ತರಿಸಿರಿ. 6 x 3 = 18

40. ಪ್ರಥಮ ಸ್ವಾತಂತ್ರ್ಯದ ವೈಫಲ್ಯಕ್ಕೆ ಕಾರಣವಾದ ಅಂಶಗಳನ್ನು ವಿಶ್ಲೇಷಿಸಿ.

ಅಥವಾ

ಸಾರಿಗೆ-ಸಂಪರ್ಕವು ಸ್ವಾತಂತ್ರ್ಯ ಚಳುವಳಿಯ ಬೆಳವಣಿಗೆಗೆ ಮೂಲ ಹೇಗೆ ಚರ್ಚಿಸಿ.

41. ಭಾರತದ ವಿದೇಶಾಂಗ ನೀತಿಯ ಉದ್ದೇಶಗಳನ್ನು ತಿಳಿಸಿ. ಅಥವಾ

ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳಾವುವು?.

42. ನಿರುದ್ಯೋಗದ ಸಮಸ್ಯೆಗೆ ಪರಿಹಾರ ಕ್ರಮಗಳಾವುವು? ಅಥವಾ

ಸಮಾಜಿಕ ಸ್ತರವಿನ್ಯಾಸ ಎಂದರೇನು? ಸಮಾಜಿಕ ಸ್ತರವಿನ್ಯಾಸ ಹೇಗೆ ಉಂಟಾಗುತ್ತದೆ?

43. ರಾಷ್ಟ್ರೀಯ ಹೆದ್ದಾರಿಗಳ ಕಾರ್ಯಗಳನ್ನು ವಿವರಿಸಿ. ಅಥವಾ

ಕೈಗಾರಿಕಾ ವಲಯಗಳನ್ನು ಪಟ್ಟಿ ಮಾಡಿರಿ.

44. ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ. ಅಥವಾ

ಕೇಂದ್ರ ಸರಕಾರದ ತೇರಿಗೆಯೇತರ ಆದಾಯದ ಮೂಲಗಳನ್ನು ತಿಳಿಸಿ.

45. ಬ್ಯಾಂಕ ಖಾತೆಯನ್ನು ತೆಗೆಯುವ ವಿಧಾನಗಳನ್ನು ತಿಳಿಸಿ. ಅಥವಾ

ವಿಮೆಯ ಪ್ರಮುಖ ತತ್ವಗಳನ್ನು ವಿವರಿಸಿ.

ಪ್ರಶ್ನೆ V] ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ. 1 x 4 = 4

46. ಸ್ವಾತಂತ್ರ್ಯ ಹೋರಾಟದಲ್ಲಿ ದಾದಾಬಾಯಿ ನವರೋಜಿಯವರ ಪಾತ್ರವನ್ನು ವಿವರಿಸಿ.

47. ಅಂದವಾದ ಭಾರತ ನಕಾಶೆ ರಚಿಸಿ. ಕೆಳಗಿನವುಗಳನ್ನು ಗುರುತಿಸಿ. 1 + 3 = 4

ಎ) ಹಿರಾಕುಡ್ ಯೋಜನೆ ಬಿ) ಕೈಗಾ ಸಿ) ಮಾಸಿನ್ ರಾಮ